ಎಂ.ವಿ.ಸಿ. ನಂ.120/2025ರಲ್ಲಿ
ಪಿ.ಡಬ್ಲ್ಯೂ-1(ದರ್ಶನ್.ಎಸ್ ಪಿ)

ದಿನಾಂಕ 17-04-2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ ಅರ್ಜಿದಾರರ ಪರ ವಕೀಲರಿಂದಃ-

ನಾನು 1ನೇ ಅರ್ಜಿದಾರನಿದ್ದು, ಈಗ ಹಾಜರುಪಡಿಸಿದ ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಲು ಕೋರುತ್ತೇನೆ. ಪ್ರಮಾಣ ಪತ್ರದಲ್ಲಿನ ಎಲ್ಲಾ ಅಂಶಗಳು ಸತ್ಯವಾಗಿವೆ ಮತ್ತು ಅದರಲ್ಲಿ ನನ್ನ ಸಹಿ ಇರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

| | |
|---|---|
| ನಿಪಿ-1 | ದೂರಿನ ದೃಢೀಕೃತ ನಕಲು |
| ನಿಪಿ-2 | ಪ್ರಥಮ ವರ್ತಮಾನ ವರದಿಯ ದೃಢೀಕೃತ ನಕಲು |
| ನಿಪಿ-3 | ಸ್ಥಳ ಪಂಚನಾಮೆಯ ನಕಲು |
| ನಿಪಿ-4 | ಗಾಯದ ಪ್ರಮಾಣ ಪತ್ರದ ನಕಲು |
| ನಿಪಿ-5 | ಐ ಎಂ ವಿ ವರದಿಯ ನಕಲು |
| ನಿಪಿ-6 | ಅಂತಿಮ ವರದಿಯ ನಕಲು |
| ನಿಪಿ-7 | ಡಿಸ್ಚಾರ್ಜ್ ಸಮ್ಮರಿ |
| ನಿಪಿ-8 | ಡಿಸ್ಚಾರ್ಜ್ ಸಮ್ಮರಿ |
| ನಿಪಿ-9 | 198 ಮೆಡಿಕಲ್ ಬಿಲ್ಲುಗಳು, 126 ವೈದ್ಯರ ಸಲಹಾ ಚೀಟಿಗಳೊಂದಿಗೆ |

ಮೇಲ್ಕಂಡ ದಾಖಲೆಗಳನ್ನು ಕ್ರಮವಾಗಿ ನಿಪಿ-1 ರಿಂದ ನಿಪಿ-9 ಎಂದು ಗುರುತಿಸಲಾಯಿತು. ಅರ್ಜಿಯನ್ನು ಪುರಸ್ಕರಿಸುವಂತೆ ಕೋರುತ್ತೇನೆ.

ಪಾಟೀ ಸವಾಲು 2ನೇ ಎದುರುದಾರರ ಪರ ವಕೀಲರಿಂದಃ-

ಎದುರುದಾರರ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ರಾಮನಗರದ ಮೋಟಾರು ವಾಹನಗಳ ಅಪಘಾತದ
ಪರಿಹಾರಗಳ ಹೆಚ್ಚುವರಿ ನ್ಯಾಯ ಮಂಡಳಿಯ
ಪೀಠಾಧಿಕಾರಿಗಳು.